‘ನಮ್ಮ ಮನೆಯಲ್ಲಿ ಕರೆಂಟು ಇದ್ದಕ್ಕಿದ್ದಂತೆ ಹೋಯಿತು, ಯಾರನ್ನು ಸಂಪರ್ಕಿಸುವುದು?’ ಎಂದು ಒಂದು ಮೆಸೇಜ್ ಹಾಕಿದರೆ ಸಾಕು ತಕ್ಷಣ ನೆರವಿಗೆ ಧಾವಿಸುವ ಸೈಬರ್ ಮಿತ್ರರು ಎಷ್ಟೋ ಉಪಯುಕ್ತ ಸಲಹೆ ಮಾಹಿತಿ ಕೊಡುವುದನ್ನು ನೋಡಬೇಕು ಆಹಾ ಎಂತಹ ಸೌಹಾರ್ದತೆ ಅನಿಸುತ್ತದೆ. ಮರುನಿಮಿಷದಲ್ಲೇ ‘ಹೇ, ಹಳದಿ ಟೀ ಶರ್ಟ್ ಹಾಕಿರುವವನೇ, ನಿನ್ನ ನಾಯಿಯ ಹೊಲಸು ನಮ್ಮ ಮನೆ ಎದುರಿನ ಬಿನ್‌ನಲ್ಲಿ ಹಾಕಿದ್ದೀಯಲ್ಲಾ, ನೀನೆಂಥ ನೀಚ’ ಎಂದೊಂದು ಬಾಣ ಎಸೆದಿರುತ್ತಾಳೆ ಒಬ್ಬ ಬಿನ್ನಾಣಗಿತ್ತಿ. ಅಸಹಿಷ್ಣುತೆ ಅಲ್ಲೆಲ್ಲೋ ಹೊಗೆಯಾಡುತ್ತಿದೆಯೆಂಬುದು ಅರಿವಿಗೆ ಬರುತ್ತದೆ. ಅದಕ್ಕೇ ನಾನು ನಮ್ಮ ಮನೆಯೊಳಗೇ

